

ಹಾಗೇಕಾಯಿತು? ಅವತ್ತೂ ಉತ್ತರವಿಲ್ಲ. ಇವತ್ತಿಗು ಕೂಡ. ಅಂಜುವಿನ ಕಣ್ಣುಗಳು ಕೊಳಗಳಾದವು. ಅವತ್ತಿನಿಂದ ಇವತ್ತಿನವರೆಗೂ ಅವಳ ಮುಗ್ಧ ಮನಸ್ಸು ಬೇರೇನೂ ಯೋಚಿಸದಷ್ಟು ತಟಸ್ಥವಾಗಿತ್ತು. ಅವಳಿಗೆ ಅವನು ಕೇವಲ ತನ್ನ ಮನದನ್ನ ಅಭಿಮನ್ಯು. ಅವನು ರಾಜಕುವರ. ಅವನು ಹೇಳಿದ: 'ತರಬೇತಿ ಮುಗಿಸಿ ಬಂದ ಕೂಡಲೇ ನಾನು ತಾಯಿಗೆ ಹೇಳಿ ನಿನ್ನ ಮನೆಗೆ ದಿಬ್ಬಣ ಕಳಿಸುತ್ತೇನೆ. ನನ್ನ ಮಾತನ್ನು ನಂಬು.' ನಂಬಿದಳು ಅಂಜು. ಅವನೂ ಅಷ್ಟೆ... ತನ್ನ ಮಾತನ್ನು ನಂಬಿದ. ಆದರೆ ನಂಬಿದ್ದೆಲ್ಲ ನಡೆಯಲೇಬೇಕೆಂದಿಲ್ಲವಲ್ಲ! ತನ್ನ ಕೈಯಲ್ಲಿದ್ದ ಬೆಳ್ಳಿಯ ಕಡಗವನ್ನು ಅವಳ ಕೈಗೆ ಹಾಕಿದ. 'ಇದು ನನ್ನ ನೆನಪಾಗಿ ನಿನ್ನಲ್ಲಿರಲಿ.' ಅಂಜು ತನ್ನ ಕೈಯಲ್ಲಿ ಅವನಿಗೆಂದೇ ಕಸೂತಿ ಹಾಕಿದ ಹಳದಿ ಕರವಸ್ತ್ರ ತಂದಿದ್ದಳು. 'ಅದರಲ್ಲಿ ರಾಜ ಮಹಲ್' ಅನ್ನು ಬಿಡಿಸಿದ್ದಳು. ಪಕ್ಕದಲ್ಲೇ ಸಣ್ಣ ಗುಡಾರ. ಅದಕ್ಕೆ ಪುಟ್ಟ ನವಿಲಿನ ಬಾಗಿಲು. ರಾಜ ಮಹಲ್ ದ್ವಾರಕ್ಕೆ ಎರಡು ಹಂಸ. ಅಷ್ಟು ಸಣ್ಣ ಜಾಗದಲ್ಲಿ ಅವಳು ಎಲ್ಲವನ್ನೂ ಬಿಡಿಸಿಟ್ಟಿದ್ದಳು. ಅದನ್ನು ಅವನಿಗೆ ನೀಡಿದಳು. 'ಒಡೆಯ... ಇದು ನನ್ನ ನೆನಪಾಗಿ ನಿಮ್ಮಲ್ಲಿರಲಿ. ನೀವು ಬರುವವರೆಗೂ ಕಾಯುವೆ.' ಮತ್ತೊಮ್ಮೆ ಇಬ್ಬರೂ ಅಪ್ಪಿಕೊಂಡರು. ಸೂರ್ಯ ಮುಳುಗಿದ್ದ. ಕತ್ತಲು ಮೆಲ್ಲನೆ ಇಳಿಯುತ್ತಿತ್ತು. ದೂರದಲ್ಲಿ ಅವಳ ತಂದೆ ಕೂಗುತ್ತಿದ್ದರು... 'ಅಂಜೂ... ಅಂಜು ಬೇಟೀ...'

ನಾಲ್ಕು ದಿನಗಳ ನಂತರ, ಅಂಜುವಿನ ಗುಡಾರದ ಮುಂದೆ ರಾಜಭಟರು ನಿಂತಿದ್ದರು. 'ಮಹಾರಾಣಿ ಅಂಬಿಕಾದೇವಿಯ ಆಜ್ಞೆಯಾಗಿದೆ. ತಕ್ಷಣ ಅವಳನ್ನು ಕರೆದುಕೊಂಡು ಹೋಗಬೇಕು.' ಅಂಜುವಿನ ತಾಯ್ತಂದೆಯರು ಹೆದರಿ ನಡುಗಿದರು. ತಮ್ಮ ಮಗಳು ರಾಜಕುವರನೊಂದಿಗೆ ಓಡಿಯಾಡಿರುವುದು ಮಹಾರಾಣಿಗೆ ತಿಳಿದಿರಬೇಕು. ಅದರ ಫಲವೇ ಇದು. ರಾಜಭಟರಲ್ಲಿಯೇ ವಿನಂತಿಸಿಕೊಂಡರು... 'ಮತ್ತೊಮ್ಮೆ ಹೀಗಾಗುವುದಿಲ್ಲ. ಮಗಳನ್ನು ಕ್ಷಮಿಸಿಬಿಡಿ. ಮಹಾರಾಣಿಯೊಂದಿಗೆ ತಾವೇ ಅರಿಕೆ ಮಾಡಿಕೊಳ್ಳುತ್ತೇವೆ' ಎಂದು. ಆದರೆ ಅವರು ರಾಜಾಜ್ಞೆಯನ್ನು ನೆರವೇರಿಸಲೇ ಬೇಕಿತ್ತು. ಅಂಜುವಿಗೆ ಮೈಯೆಲ್ಲ ಪುಳಕ. ಹೇಗಿದ್ದರೂ ರಾಜಕುವರ ಹೇಳಿದ್ದನಲ್ಲವೇ... ದಿಬ್ಬಣ ಕಳಿಸುತ್ತೇನೆ ಎಂದು! ತಾನು ರಾಜ ಮಹಲಿಗೆ ಹೋಗಬೇಕು. ಅಲ್ಲಿ ತನ್ನ ದೊರೆ ತನಗಾಗಿ ಕಾಯುತ್ತಿರುವನಲ್ಲವೇ? ಶಿಸ್ತಾಗಿ ಅಲಂಕರಿಸಿಕೊಂಡಳು. ತಾನೇ ನೆಯ್ದಿದ್ದ ಜೋಡಿ ನವಿಲಿನ, ಅಚ್ಚ ಕೆಂಪು ಬಣ್ಣದ ಕನ್ನಡಿ ಲಂಗ ಹಾಕಿಕೊಂಡಳು. ಮುಖದ ತುಂಬಾ ನಾಚಿಕೆ... ಸಂತೋಷ. ತಾಯ್ತಂದೆಯರ ಅಳಲು ಅವಳ ಮನಸ್ಸಿಗೆ ತಾಗುತ್ತಲೇ ಇಲ್ಲ. ಒಂಟೆ ಬಂಡಿಯಲ್ಲಿ ಕುಳಿತು ತಾಯ್ತಂದೆಯರ ಜೊತೆ ಹೊರಟಳು. ಮರಳುಗಾಡಿನಲ್ಲಿ ಒಂಟೆ ಬಂಡಿ ಲಯಬದ್ಧವಾಗಿ ಚಲಿಸುತ್ತಿದ್ದರೆ, ಒಂಟೆಯ ಕೊರಳಿಗೆ ಕಟ್ಟಿದ್ದ ದಪ್ಪ ಗಂಟೆ ತಾಳಬದ್ಧವಾಗಿ ಉಲಿಯುತ್ತಿತ್ತು. ಜಯಪುರದ ಕೋಟೆಯ ಒಳಗೆ ಹೋಗುವಾಗ ಎರಡೂ ಕಡೆ ನೋಡುತ್ತಾ ಕುಳಿತಿದ್ದಳು ಅಂಜು. ಪಟ್ಟಣದ ಜನ ತಮ್ಮ ಕೆಲಸ ತಾವು ಮಾಡಿಕೊಳ್ಳುತ್ತಿರುತ್ತಾರೆ. ಹೊಸಬರು ಬಂದರೆ ಒಂದು ಕ್ಷಣ ನೋಡಬಹುದು ಅಷ್ಟೆ. ತಮ್ಮ ಗುಂಪಿನವರಂತೆ ಅವರ ಸುತ್ತ ನೆರೆದು ಪ್ರಶ್ನಿಸುವುದಿಲ್ಲ. ಅರಮನೆಯ ಮುಂದೆ ಇಳಿದ ಅಂಜುವನ್ನು ರಾಣಿವಾಸದ ದಾಸಿಯರು ಒಳಗೆ ಹೋಗುವಂತೆ ಸನ್ನೆ ಮಾಡಿದರು. ಅಂಜು ತಾಯ್ತಂದೆಯರ ಜೊತೆ ಒಳಗೆ ಕಾಲಿಟ್ಟಳು. ಮೊತ್ತ ಮೊದಲ ಬಾರಿ ಅರಮನೆಯ ಮೆಟ್ಟಿಲೇರಿ ಒಳಗೆ ಹೋಗುತ್ತಿರುವ ರೋಮಾಂಚನ ಅವಳನ್ನಾವರಿಸಿತ್ತು. ಆ ವೈಭವ, ಆ ಸಿರಿತನ ಅವಳು ಊಹಿಸಲೂ ಸಾಧ್ಯವಿರಲಿಲ್ಲ. ಎತ್ತರೆತ್ತರದ ಬಾಗಿಲು, ಕಿಟಕಿಗಳು, ಅಲ್ಲಿ ಮಾಡಿರುವ ಕಸೂತಿಗಳು, ಚಿತ್ರಗಳು, ಅವುಗಳಿಗೆ ಹಾಕಿರುವ ಬಣ್ಣಗಳು... ಪ್ರತಿಯೊಂದು ಇಂಚು ಕೂಡ ಸಿರಿತನದ ಕೌಶಲ್ಯದ ಕುರುಹಾಗಿತ್ತು. ಅಂಜು ಮೆಲ್ಲನೆ ರಾಣಿ ಅಂಬಿಕಾದೇವಿಯ ಕೋಣೆಯೊಳಗೆ ಹೊಕ್ಕಳು. ರಾಣಿ ಕುಳಿತಿದ್ದ ದಂತದ ಮಂಚ, ಅದಕ್ಕೆ ಮಾಡಿರುವ ಕೆತ್ತನೆ ಕೆಲಸ ಅಮೋಘ. ಅರ್ಧ ತಲೆ ಬಗ್ಗಿಸಿಯೇ ಎಲ್ಲವನ್ನೂ ನೋಡಿದ ಅಂಜು,